# ಪಾಲಿಕೆ ಚುನಾವಣೆ: ದಿನವಿಡೀ ಸದಸ್ಯರ ವಾಗ್ವಾದ!

9-9-2020

## ಚುನಾವಣೆ ಮುಂದೂಡಲು ಸರ್ಕಾರದ ಯತ್ನ: ವಿರೋಧ ಪಕ್ಷಗಳು | ಚುನಾವಣೆ ವಿಳಂಬಕ್ಕೆ ಆಯೋಗ ಕಾರಣ: ಆಡಳಿತ ಪಕ್ಷ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅವಧಿಮುಗಿಯುತ್ತಿರುವ ಬಿಬಿಎಂಪಿಯ ಚುನಾವಣೆ ನಡೆಸುವ ವಿಷಯದಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ದಿನವಿಡೀ ವಾದ-ಪ್ರತಿವಾದ ನಡೆಯಿತು.

ಪ್ರತಿಪಕ್ಷಗಳು ಪಾಲಿಕೆಯ ಚುನಾವಣೆಯನ್ನು ಮುಂದೂಡಲು ಸರ್ಕಾರ ಯತ್ನಿಸುತ್ತಿದೆ ಎಂದು ಆರೋಪಿಸಿದರೆ, ಇದಕ್ಕೆ ಪ್ರತಿಯಾಗಿ ಚುನಾವಣೆ ವಿಳಂಬಕ್ಕೆ ಆಯೋಗ ಕಾರಣ, ಚುನಾವಣೆಗೆ ರಾಜ್ಯ ಸರ್ಕಾರ ಮತ್ತು ಪಾಲಿಕೆ ಸಿದ್ಧವಿದೆ ಎಂದು ಆಡಳಿತ ಪಕ್ಷದ ಸದಸ್ಯರು ತಿರುಗೇಟು ನೀಡಿದರು.

ಸೆ.10ಕ್ಕೆ ಪಾಲಿಕೆ ಸದಸ್ಯರ ಅಧಿಕಾರ ಅವಧಿ ಮುಕ್ತಾಯಗೊಳ್ಳುವುದರಿಂದ ಮಂಗಳವಾರ ಅವಧಿಯ ಕೊನೆ ಮಾಸಿಕ ಸಭೆ ಕರೆಯಲಾಗಿತ್ತು. ಸಭೆ ಆರಂಭವಾಗುತ್ತಿದಂತೆ ಕಾಂಗ್ರೆಸ್ ಸದಸ್ಯರು ರಾಜ್ಯ ಸರ್ಕಾರ ಕೋವಿಡ್ ಕಾರಣ ನೀಡಿ ಬಿಬಿಎಂಪಿಯ ಚುನಾವಣೆ ಮುಂದೂಡುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದಾಗ ಆಡಳಿತ ಪಕ್ಷದ ಬಿಜೆಪಿ ಸದಸ್ಯರು ಎದ್ದು ನಿಂತು ಇದಕ್ಕೆ ಆಕ್ಷೇಪಿಸಿದರು. ಆಗ ಉಭಯ ಸದಸ್ಯರ ನಡುವೆ ನಡುವೆ ವಾಗ್ವಾದ ಉಂಟಾಯಿತು. ಮಧ್ಯಪ್ರವೇಶಿಸಿದ ಮೇಯರ್, ಚುನಾವಣೆ ಕುರಿತು ಚರ್ಚೆ ಮಾಡೋಣ ಎಂದು ಹೇಳಿ ಇಡೀ ದಿನ ಚರ್ಚೆಗೆ ಅವಕಾಶ ನೀಡಿದರು.

### ಪ್ರಣಬ್‌ಗೆ ಸಂತಾಪ

ಇತ್ತೀಚಿಗೆ ನಿಧನರಾದ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ನಿಧನಕ್ಕೆ ಸಭೆಯಲ್ಲಿ ಸಂತಾಪ ಸೂಚಕ ನಿರ್ಣಯ ಮಂಡಿಸಲಾಯಿತು. ಬಿಬಿಎಂಪಿ ಮೇಯರ್ ಸೇರಿದಂತೆ ಹಲವು ಮುಖಂಡರು ನುಡಿ ನಮನ ಸಲ್ಲಿಸಿದರು.

ವಿಪಕ್ಷದ ನಾಯಕ ಅಬ್ದುಲ್‌ವಾಜಿದ್ ಮಾತನಾಡಿ, 2007-2010ರ ವರೆಗೆ ಚುನಾವಣೆ ಮುಂದೂಡಿದ ರೀತಿಯಲ್ಲಿಯೇ ಸರ್ಕಾರ ಈ ಬಾರಿಯೂ ಚುನಾವಣೆ ಮುಂದೂಡಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಚುನಾವಣೆ ನಡೆಸಲು ಸರ್ಕಾರಕ್ಕೆ ಭಯವಿದೆ ಎಂದು ಆರೋಪಿಸಿದರು.

**ಚುನಾವಣಾ ಆಯೋಗ ವಿಫಲ:** ಬಿಜೆಪಿ ಮುಖಂಡ ಪದ್ಮನಾಭ ರೆಡ್ಡಿ ಮಾತನಾಡಿ, ಬಿಬಿಎಂಪಿ 2020-25ನೇ ಸಾಲಿನ ಪಾಲಿಕೆ ಚುನಾವಣೆ ನಡೆಯದಿರಲು ಚುನಾವಣೆ ಆಯೋಗವೇ ಕಾರಣ. ಆಯೋಗ ಸಕಾಲದಲ್ಲಿ ಚುನಾವಣೆ ನಡೆಸುವಲ್ಲಿ ವಿಫಲವಾಗಿದೆ. ಇದಕ್ಕೆ ಆಕ್ಷೇಪಿಸಿದ ವಿಪಕ್ಷ ಸದಸ್ಯರು, ಸರ್ಕಾರ ಮೀಸಲಾತಿ ಪಟ್ಟಿ ಪ್ರಕಟಿಸಿಲ್ಲ. ಹೀಗಾಗಿ, ಆಯೋಗವೇ ಕೋರ್ಟ್ ಮೊರೆ ಹೋಗಿದೆ ಎಂದರು.



ಬಿಬಿಎಂಪಿ ಪ್ರಸಕ್ತ ಸದಸ್ಯರ ಅಧಿಕಾರಾವಧಿಯ ಕೊನೆಯ ಕೌನ್ಸಿಲ್ ಸಭೆಯಲ್ಲಿ ಮೇಯರ್ ಗೌತಮ್‌ಕುಮಾರ್ ಜೈನ್ ಹಾಗೂ ಉಪಮೇಯರ್ ರಾಮ್ ಮೋಹನ್‌ರಾಜ್ ಭಾಗಿಯಾಗಿರುವುದು.

### ಹೊಸ ಕಾಯ್ದೆಯಿಂದ ಅಧಿಕಾರ ಮೊಟಕು

ಆಡಳಿತ ಪಕ್ಷದ ಮಾಜಿ ನಾಯಕ ಹಾಗೂ ಪಾಲಿಕೆ ಸದಸ್ಯ ಎಂ.ಶಿವರಾಜು ಮಾತನಾಡಿ, ರಾಜ್ಯ ಸರ್ಕಾರ ಬಿಬಿಎಂಪಿಗೆ ಪ್ರತ್ಯೇಕ ಕಾಯ್ದೆ ತರಲು ಮುಂದಾಗಿದೆ. ಇದರಲ್ಲಿ ಪಾಲಿಕೆ ಸದಸ್ಯರ ಅಧಿಕಾರವನ್ನು ಮೊಟಕುಗೊಳಿಸುವ ಹಲವು ಅಂಶಗಳಿವೆ ಎಂದು ದೂರಿದರು. ಇದಕ್ಕೆ ಧ್ವನಿಗೂಡಿದ ಅಬ್ದುಲ್ ವಾಜೀದ್, ಹೊಸ ಕಾಯ್ದೆಯಲ್ಲಿ ಯಾವ ಅಂಶ ಇದೆ, ಯಾವುದೆಲ್ಲ ಜಾರಿಯಾಗಲಿದೆ ಎನ್ನುವ ಬಗ್ಗೆ ಒಮ್ಮೆಯೂ ಚರ್ಚೆ ಆಗಲಿಲ್ಲ. ತಜ್ಞರು, ನಗರಾಭಿವೃದ್ಧಿ ಪರಿಣಿತರ ಅಭಿಪ್ರಾಯ ಪಡೆದುಕೊಳ್ಳಲಿಲ್ಲ ಎಂದರು.

### ಪಶ್ಚಿಮ ಬಂಗಾಳ ಮಾದರಿ ಜಾರಿಗೆ ಆಗ್ರಹ

ಪಶ್ಚಿಮ ಬಂಗಾಳದಲ್ಲಿ 91 ಸ್ಥಳೀಯ ಸಂಸ್ಥೆಗಳ (ಮುನ್ಸಿಪಾಲಿಟಿ) ಸದಸ್ಯರ ಅಧಿಕಾರ ಅವಧಿಯನ್ನು ಮುಂದಿನ ಚುನಾವಣೆ ಘೋಷಣೆ ಆಗುವವರೆಗೆ ಮುಂದುವರಿಸಲಾಗಿದೆ. ಇದೇ ಮಾದರಿಯಲ್ಲಿ ಸರ್ಕಾರ ಪಾಲಿಕೆ ಸದಸ್ಯರ ಅವಧಿ ವಿಸ್ತರಿಸಬೇಕು ಎಂದು ಪದ್ಮನಾಭ ರೆಡ್ಡಿ ಅಭಿಪ್ರಾಯಪಟ್ಟರು. ಇದಕ್ಕೆ ಪಕ್ಷಾತೀತ ಬೆಂಬಲ ವ್ಯಕ್ತವಾಯಿತು.

### ಪಾಲಿಕೆ ಸದಸ್ಯರನ್ನು ತುಳಿಯುವ ವ್ಯೂಹ

ಪಾಲಿಕೆ ಸದಸ್ಯರನ್ನು ತುಳಿಯುವ ವ್ಯೂಹ ನಮಗೆ ತಿಳಿಯದಂತೆ ಸೃಷ್ಟಿಯಾಗುತ್ತಲೇ ಇದೆ. ಇಲ್ಲಿರುವ ಹಲವು ಪಾಲಿಕೆ ಸದಸ್ಯರು ಮುಂದಿನ ಚುನಾವಣೆಗಳಲ್ಲಿ ಶಾಸಕರಾಗಿ ಸ್ಪರ್ಧಿಸಲಿದ್ದಾರೆ. ಆದರೆ, ಇದು ಕೆಲವರಿಗೆ ಬೇಕಾಗಿಲ್ಲ. ಇದೇ ಕಾರಣಕ್ಕೆ ಚುನಾವಣೆ ಮುಂದೂಡಿಕೆ ತಂತ್ರ ಮಾಡಲಾಗುತ್ತಿದೆಂದು ಶಿವರಾಜು ಆರೋಪಿಸಿದರು.

# ಬಿಬಿಎಂಪಿ ಆಸ್ತಿ ಕಡಿಮೆ ದರಕ್ಕೆ ಬಾಡಿಗೆ ನೀಡಲು ನಿರ್ಧಾರ

## 45ಕ್ಕೂ ಹೆಚ್ಚು ಆಸ್ತಿ 5 ವರ್ಷಕ್ಕೆ ಬಾಡಿಗೆ, ಗುತ್ತಿಗೆ | ಸರ್ವಾನುಮತದ ತೀರ್ಮಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ಸದಸ್ಯರ ಅಧಿಕಾರ ಅವಧಿ ಇನ್ನೊಂದು ದಿನ ಬಾಕಿ ಇರುವಾಗ 45ಕ್ಕೂ ಅಧಿಕ ಪಾಲಿಕೆ ಆಸ್ತಿಗಳನ್ನು ಕಡಿಮೆ ದರಕ್ಕೆ ಬಾಡಿಗೆ ಮತ್ತು ಗುತ್ತಿಗೆ ನೀಡುವ ನಿರ್ಣಯವನ್ನು ಮಂಗಳವಾರ ತೆಗೆದುಕೊಳ್ಳಲಾಗಿದೆ.

ಬಿಬಿಎಂಪಿ ಸದಸ್ಯ ಅಧಿಕಾರ ಅವಧಿ ಸೆ.10ಕ್ಕೆ ಮುಕ್ತಾಯಗೊಳ್ಳಲಿದೆ. ಹಾಗಾಗಿ, ತರಾತುರಿಯಲ್ಲಿ ಮಂಗಳವಾರದ ಸಭೆಯಲ್ಲಿ ಕಡಿಮೆ ಶುಲ್ಕದ ಬಾಡಿಗೆ ಮತ್ತು ಗುತ್ತಿಗೆಗೆ ಪಾಲಿಕೆಯ ಸುಮಾರು 45ಕ್ಕೂ ಹೆಚ್ಚು ಆಸ್ತಿಗಳನ್ನು ಕನಿಷ್ಠ 5 ವರ್ಷಗಳವರೆಗೆ ಗುತ್ತಿಗೆ ನೀಡಲು ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾಗಿದೆ.

ಪಾಲಿಕೆ ಆಸ್ತಿಗಳನ್ನು ಕಡಿಮೆ ಹಣಕ್ಕೆ ಗುತ್ತಿಗೆ ನೀಡಬಾರದು. ಪ್ರಸ್ತುತ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಪಾಲಿಕೆ ಆಸ್ತಿಗಳನ್ನು ಗುತ್ತಿಗೆ ಅಥವಾ ವಾರ್ಷಿಕ ಬಾಡಿಗೆ ನೀಡಬೇಕು, ಗುತ್ತಿಗೆ ಆಸ್ತಿಗಳನ್ನು ವಶಕ್ಕೆ ಪಡೆಯಬೇಕು ಎಂಬ ಮಾತುಗಳನ್ನು ಹೇಳುತ್ತಿದ್ದರು. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಮಂಗಳವಾರದ ಸಭೆಯಲ್ಲಿ ಕಡಿಮೆ ದರಕ್ಕೆ ಪಾಲಿಕೆ ಆಸ್ತಿಗಳನ್ನು ಗುತ್ತಿಗೆ ಮತ್ತು ಬಾಡಿಗೆ ನೀಡಲಾಗಿದೆ.

ಜತೆಗೆ ಮಂಗಳವಾರ ನಗರದ ರಸ್ತೆಗಳು, ವೃತ್ತ, ಉದ್ಯಾನ ಹಾಗೂ ಮೇಲ್ಸೇತುವೆಗಳಿಗೆ ಸಮಾಜ ಸೇವಕರು, ಮಹನೀಯರ ಹೆಸರನ್ನು ನಾಮಕರಣ ನಿರ್ಣಯ ತೆಗೆದುಕೊಳ್ಳಲಾಗಿದೆ. ಸ್ವಾಮಿ ವಿವೇಕಾನಂದ, ಶಿವಕುಮಾರಸ್ವಾಮೀಜಿ, ಕನಕದಾಸ ಹಾಗೂ ಸಂಗೊಳ್ಳಿ ರಾಯಣ್ಣ ಪ್ರತಿಮೆಗಳ ನಿರ್ಮಾಣಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ.

**ಶಾಲಾ-ಕಾಲೇಜುಗಳಿಗೆ ಕೆಂಪೇಗೌಡರ ಹೆಸರು:** ದಾನಿಗಳಿಂದ ನೆರವು ಪಡೆದು ನಿರ್ಮಾಣವಾಗದ ಹಾಗೂ ಯಾವುದೇ ನಾಮಾಂಕಿತವಿಲ್ಲದ ಪಾಲಿಕೆ ಶಾಲಾ-ಕಾಲೇಜುಗಳಿಗೆ ನಾಡಪ್ರಭು ಕೆಂಪೇಗೌಡ ಶಾಲಾ-ಕಾಲೇಜುಗಳೆಂದು ನಿರ್ಮಾಣ ಮಾಡಲು ಒಪ್ಪಿಗೆ ಸೂಚಿಸಲಾಯಿತು.

### ಆಸ್ತಿ ವಿವರ ಸಲ್ಲಿಸದ ಸದಸ್ಯರಿಗೆ ನೀಡಿದ್ದ ಕಾಲ ಮಿತಿ ಮನ್ನಾ

2015-16ರಲ್ಲಿ ಆಯ್ಕೆಯಾದ ಪಾಲಿಕೆ ಸದಸ್ಯರು ಆಸ್ತಿ ಘೋಷಣೆ ಮಾಡಿಕೊಳ್ಳಲು ತಿಳಿಸಲಾಗಿತ್ತು. ಆದರೆ, ಕಾಲ ಮಿತಿ ನೀಡಿದರೂ ಆಸ್ತಿ ಘೋಷಿಸಿಕೊಳ್ಳದ 19 ಸದಸ್ಯರ ಅಧಿಕಾರ ಮುಕ್ತಾಯವಾಗುತ್ತಿದೆ. 19 ಸದಸ್ಯರಿಗೆ ನೀಡಲಾದ ಕಾಲಮಿತಿ ಮನ್ನಾ ಮಾಡಲು ಸರ್ಕಾರಕ್ಕೆ ಕೋರುವಂತೆ ಆಯುಕ್ತರಿಗೆ ಸೂಚಿಸಿ ತೀರ್ಮಾನಿಸಲಾಗಿದೆ.

### ಏರ್‌ಪೋರ್ಟ್ ರಸ್ತೆಗೆ 1 ಕೋಟಿ ಮೀಸಲು

ರೇವಾ ಕಾಲೇಜ್ ಜಂಕ್ಷನ್‌ನಿಂದ ವಿದ್ಯಾನಗರ ಕ್ರಾಸ್‌ವರೆಗಿನ ರಸ್ತೆ ನಿರ್ಮಾಣದ ಭೂ ಸ್ವಾಧೀನಕ್ಕೆ ₹1 ಕೋಟಿ ಮೀಸಲಿಡುವ ತೀರ್ಮಾನ ತೆಗೆದುಕೊಳ್ಳಲಾಗಿದೆ. 600ಕ್ಕೂ ಹೆಚ್ಚು ಗುತ್ತಿಗೆ ಆಧಾರದ ಶಿಕ್ಷಕರು ಸಮಾನ ವೇತನ ನೀಡಲು ಕ್ರಮವಹಿಸುವಂತೆ ನಿರ್ಧರಿಸಲಾಯಿತು.